ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಗುಬ್ಬಿ

ಸಿ ಸಿ ನಂ.**519/2021**

ಪಿರ್ಯಾದು, : ಸರ್ಕಾರ, ಗುಬ್ಬಿ ಪೊಲೀಸ್ ಠಾಣೆ.

ವಿರುದ್ಧ

ಆರೋಪಿತರು : 1. ಶಶಿಧರ ಬಿನ್ ಶಂಕರಲಿಂಗಪ್ಪ
ವಯಾಃ 45 ವರ್ಷ,
ಸಾಃ ಅತ್ತಿಕಟ್ಟೆ, ಕಡಬ ಹೋಬಳಿ,
ಗುಬ್ಬಿ ತಾಲ್ಲೂಕು
2. ಮೋಹನ್ ಕುಮಾರ ಎ.ವೈ.
ವಯಾಃ38 ವರ್ಷ
ಸಾಃ ಅತ್ತಿಕಟ್ಟೆ, ಕಡಬ ಹೋಬಳಿ,
ಗುಬ್ಬಿ ತಾಲ್ಲೂಕು

## ದೋಷಾರೋಪಣೆ

ನಾನು ಶ್ರೀಮತಿ ಉಂಡಿ ಮಂಜುಳ ಶಿವಪ್ಪ, ಬಿ.ಎಸ್ಸಿ, ಎಲ್ ಎಲ್ ಎಂ , ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಗುಬ್ಬಿ ಆರೋಪಿತರಾದ ನಿಮ್ಮ ಮೇಲೆ ಮಾಡಿರುವ ದೋಷಾರೋಪಣೆ ಏನೆಂದರೆಃ-

ದಿಃ 14-04-2021 ರಂದು ರಾತ್ರಿ 8.30 ಗಂಟೆಯ ಸಮಯದಲ್ಲಿ ಗುಬ್ಬಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಗುಬ್ಬಿ ತಾಲೂಕು, ಕಡಬಾ ಹೋಬಳಿ, ಅತ್ತಿಕಟ್ಟೆ ಗ್ರಾಮದ ಸರ್ವೆ ನಂ.7 ರಲ್ಲಿ ಪಿರ್ಯಾದಿ ಬಾಬ್ತು ಜಮೀನಿನಲ್ಲಿ ಸಾಕ್ಷಿ - 1 ರವರು ಕಾರಿನ ಬಳಿ ಹೋಗುತ್ತಿದ್ದಾಗ 1 ಮತ್ತು 2 ನೇ ಆರೋಪಿತರಾದ ನೀವು ಏಕಾಏಕಿಯಾಗಿ ಸಾಕ್ಷಿ - 1 ರವರ ಮೇಲೆ ಗಲಾಟೆ ಮಾಡಿ ಅವರಿಗೆ ಲೋಫರ್ ನನ್ಮಗನೇ, ಸೂಳೇಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿರುತ್ತೀರಾ. ಕಾರಣ ಆರೋಪಿತರಾದ ನೀವು ಭಾ. ದಂ. ಸಂ. ಕಲಂ. **504** ಅಡಿಯಲ್ಲಿ ಶಿಕ್ಷಾರ್ಹ ಅಪರಾದ ಎಸಗಿದ್ದೀರೆಂಬ ದೋಷಾರೋಪಣೆ ನನ್ನ ಸಂಜ್ಞೆಯಲ್ಲಿದೆ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ ವೇಳೆ ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ **1** ರವರ ಮೇಲೆ ಗಲಾಟೆ ಮಾಡಿ, ಆರೋಪಿ **-1** ರವರು ತಂದಿದ್ದ ರೋಟಿ ಕುಡ್ಲುವಿನಿಂದ

ಸಾಕ್ಷಿ - **1** ರವರ ಎಡತಲೆಗೆ ಹೊಡೆದಿರುತ್ತಿರಿ ಹಾಗೂ **2** ಆರೋಪಿಯಾದ ನೀವು ಸಾಕ್ಷಿ - **1** ರವರನ್ನು ನೆಲಕ್ಕೆ ಕೆಡವಿಕೊಂಡು ಕೈಗಳಿಂದ ಮತ್ತು ಕಾಲಿನಿಂದ ಒದ್ದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತೀರಿ. ಕಾರಣ ಆರೋಪಿತರಾದ ನೀವು ಭಾ. ದಂ. ಸಂ. ಕಲಂ **323, 324** ಅಡಿಯಲ್ಲಿ ಶಿಕ್ಷಾರ್ಹ ಅಪರಾದ ಎಸಗಿದ್ದೀರೆಂಬ ದೋಷಾರೋಪಣೆ ನನ್ನ ಸಂಜ್ಞೆಯಲ್ಲಿದೆ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ ವೇಳೆ ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ **1** ರವರ ಮೇಲೆ ಗಲಾಟೆ ಮಾಡಿ, **1** ಮತ್ತು **2** ನೇ ಆರೋಪಿತರಾದ ನೀವು ಸಾಕ್ಷಿ - **1** ರವರಿಗೆ, ನಿನ್ನ ಇಷ್ಟಕ್ಕೆ ಬಿಡುವುದಿಲ್ಲ, ನಿನಗೆ ಒಂದು ಗತಿ ಕಾಣಿಸುತ್ತೇನೆಂದು ಜೀವ ಬೆದರಿಕೆ ಹಾಕಿರುವ ಕಾರಣ ಆರೋಪಿತರಾದ ನೀವು ಭಾ. ದಂ. ಸಂ. ಕಲಂ **506** ಅಡಿಯಲ್ಲಿ ಶಿಕ್ಷಾರ್ಹ ಅಪರಾದ ಎಸಗಿದ್ದೀರೆಂಬ ದೋಷಾರೋಪಣೆ ನನ್ನ ಸಂಜ್ಞೆಯಲ್ಲಿದೆ.

(ಈ ಮೇಲಿನ ಅಪರಾಧವನ್ನು ನೀವು ಇದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಮತ್ತು ಸಂಜ್ಞೆಯಡಿ ಮಾಡಿರುವ ಕಾರಣ ನಿಮ್ಮ ಮೇಲಿನ ವಿಚಾರಣೆ ಇದೇ ನ್ಯಾಯಾಲಯದಲ್ಲಿ ನಡೆಯಬೇಕೆಂದು ಈ ಹೊತ್ತು ದಿನಾಂಕ 09.08.2023 ರಂದು ಆದೇಶಿಸುತ್ತೇನೆ)

ಸಹಿ/-

(ಉಂಡಿ ಮಂಜುಳ ಶಿವಪ್ಪ)
ದಿಃ 09.08.2023 ಹಿರಿಯ ಸಿವಿಲ್ ನ್ಯಾಯಾಧೀಶರು
ಗುಬ್ಬಿ

ಸಿ ಸಿ ನಂ**.519/2021**

ಪಿರ್ಯಾದು : ಸರ್ಕಾರ, ಗುಬ್ಬಿ ಪೊಲೀಸ್ ಠಾಣೆ.

ವಿರುದ್ದ

ಆರೋಪಿತರು : 2. ಮೋಹನ್ ಕುಮಾರ ಎ.ವೈ.
ವಯಾಃ38 ವರ್ಷ
ಸಾಃ ಅತ್ತಿಕಟ್ಟೆ, ಕಡಬ ಹೋಬಳಿ,
ಗುಬ್ಬಿ ತಾಲ್ಲೂಕು

**ಆಪಾಧನೆ**

ಪ್ರಶ್ನೆ–1 ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೆ?

ಉತ್ತರಃ ತಿಳಿಯಿತು

ಪ್ರಶ್ನೆ–2 ನಿಮ್ಮ ಮೇಲಿನ ಅಪರಾಧಗಳನ್ನು ನೀವು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?

ಉತ್ತರಃ ಇಲ್ಲ ವಿಚಾರಣೆ ಆಗಲಿ

(ಈ ಮೇಲಿನಂತೆ ಆರೋಪಿತರನ್ನು ಪ್ರಶ್ನಿಸಿ ಅವರು ನೀಡಿದ ಉತ್ತರಗಳನ್ನು ಬರೆದುಕೊಳ್ಳಲಾಗಿದೆ)

ಸಹಿ/-

ದಿಃ 09.08.2023 ಹಿರಿಯ ಸಿವಿಲ್ ನ್ಯಾಯಾಧೀಶರು
ಗುಬ್ಬಿ

ಸಹಿ/-

<u>ಆರೋಪಿತರ ಸಹಿಃ</u>

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಗುಬ್ಬಿ

ಸಿ ಸಿ ನಂ**.519/2021**

ಪಿರ್ಯಾದು : ಸರ್ಕಾರ, ಗುಬ್ಬಿ ಪೊಲೀಸ್ ಠಾಣೆ.

ವಿರುದ್ದ

ಆರೋಪಿತರು : 1. ಶಶಿಧರ ಬಿನ್ ಶಂಕರಲಿಂಗಪ್ಪ
ವಯಾಃ 45 ವರ್ಷ,
ಸಾಃ ಅತ್ತಿಕಟ್ಟೆ, ಕಡಬ ಹೋಬಳಿ,
ಗುಬ್ಬಿ ತಾಲ್ಲೂಕು.

**ಆಪಾಧನೆ**

ಪ್ರಶ್ನೆ-1 ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೆ?

ಉತ್ತರಃ ತಿಳಿಯಿತು

ಪ್ರಶ್ನೆ-2 ನಿಮ್ಮ ಮೇಲಿನ ಅಪರಾಧಗಳನ್ನು ನೀವು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?

ಉತ್ತರಃ ಇಲ್ಲ ವಿಚಾರಣೆ ಆಗಲಿ

(ಈ ಮೇಲಿನಂತೆ ಆರೋಪಿತರನ್ನು ಪ್ರಶ್ನಿಸಿ ಅವರು ನೀಡಿದ ಉತ್ತರಗಳನ್ನು ಬರೆದುಕೊಳ್ಳಲಾಗಿದೆ)

ಸಹಿ/-
ದಿಃ 09.08.2023 ಹಿರಿಯ ಸಿವಿಲ್ ನ್ಯಾಯಾಧೀಶರು
ಗುಬ್ಬಿ

ಸಹಿ/-
<u>ಆರೋಪಿತರ ಸಹಿಃ</u>